**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.198/2021

**PW**. 3

**CW**. 3

**ಸಾಕ್ಷಿಯ ಹೆಸರು –ದರ್ಶನ**

**ತಂದೆಯ ಹೆಸರು –ನಾಗಯ್ಯ**

**ವಯಸ್ಸು –22 ವರ್ಷಗಳು**

ದಿನಾಂಕ 29–01–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ದೇವರಾಜ ಕಾಲೋನಿ, ಹುಣಸೂರು ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1 ನನ್ನ ಅತ್ತೆ ಮಗ. ಚಾಸಾ–2 ನನ್ನ ಚಿಕ್ಕಪ್ಪನ ಮಗ. ಚಾಸಾ–4 ನನ್ನ ಮಾವ. ಆರೋಪಿತರೆಲ್ಲರೂ ಗೊತ್ತು. ಅವರೆಲ್ಲರೂ ನಮ್ಮ ಊರು ಪಕ್ಕ ಎಮ್ಮಿಗೆ ಕಾಲೋನಿ ವಾಸಿಗಳು. ಈಗ್ಗೆ 5 ವರ್ಷಗಳ ಹಿಂದೆ ಒಂದು ದಿನ ಸಂಜೆ ಸಮಯದಲ್ಲಿ ನಮ್ಮ ಮತ್ತು ಚಾಸಾ–2 ರವರ ಮನೆಯ ಮುಂದೆ 1, 2 ಮತ್ತು 4 ನೇ ಆರೋಪಿತರು ದ್ವಿಚಕ್ರ ವಾಹನವನ್ನು ಉಪಯೋಗಿಸಿ, ವಿಲಿಂಗ್ ಚಾಲನೆ ಮಾಡುತ್ತಿದ್ದು, ಅದಕ್ಕೆ ನಾನು ಮತ್ತು ಚಾಸಾ–2 ರವರು ದನಕರುಗಳು ಇದ್ದಾವೆ, ವಿಲಿಂಗ್ ಮಾಡಬೇಡಿ ಎಂದು ಹೇಳಿದೆವು. ಆದಾದ ಒಂದು ವಾರದ ನಂತರ ಚಾಸಾ–1, ಚಾಸಾ–2 ಹಾಗೂ ನಾನು ದೇವರಾಜ ಕಾಲೋನಿ ಗೇಟ್ ಬಳಿ ನಿಂತಿರುವಾಗ, ಎಲ್ಲ ಆರೋಪಿತರೂ ಆಟೋದಲ್ಲಿ ಮತ್ತು ಮೋಟರ್ ಸೈಕಲ್ ನಲ್ಲಿ ಅಲ್ಲಿಗೆ ಬಂದು ನನ್ನ ಮತ್ತು ಚಾಸಾ–2 ರವರ ಜೊತೆ ಜಗಳ ಮಾಡಿ, ವಿಲಿಂಗ್ ಮಾಡುವುದನ್ನು ಕೇಳಲು ನೀನ್ಯಾರು ಎಂದು, ಕೈಯಿಂದ ನನಗೆ ಮತ್ತು ಚಾಸಾ–2 ರವರಿಗೆ ಹೊಡೆದರು. ಚಾಸಾ–1 ರವರು ಕೇಳಲು ಹೋದಾಗ, 1 ನೇ ಆರೋಪಿ ಚಾಸಾ–1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ತನ್ನ ಬಳಿ

ಇದ್ದ ಗುದ್ದಲಿಯಿಂದ ಚಾಸಾ–1 ರವರ ತಲೆಯ ಹಿಂಭಾಗದ ಬಲಭಾಗಕ್ಕೆ ಹೊಡೆದು ರಕ್ತಗಾಯ ಮಾಡಿದ. ಚಾಸಾ–1 ರವರ ತಲೆಯಿಂದ ರಕ್ತ ಬಂದ ಕಾರಣ ಆರೋಪಿತರು ಅಲ್ಲಿಂದ ಆಟೋದಲ್ಲಿ ಮತ್ತು ಮೋಟರ್ ಸೈಕಲ್ ನಲ್ಲಿ ಹೊರಟು ಹೋದರು. ಚಾಸಾ–4 ರವರಿಗೆ ಫೋನ್ ಮಾಡಿ ತಿಳಿಸಿದೆವು.

ನಂತರ ಚಾಸಾ–4 ರವರ ಚಾಸಾ–1 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ–1 ರವರು ಮೈಸೂರಿನ ಕೆ ಆರ್ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಮರುದಿನ ಚಾಸಾ–1 ರವರು ಪೊಲೀಸರಿಗೆ ಬಂದು ದೂರು ನೀಡಿರುತ್ತಾರೆ. 1 ನೇ ಆರೋಪಿ ಚಾಸಾ–1 ರವರಿಗೆ ಹೊಡೆದ ಗುದ್ದಲಿಯನ್ನು ನೋಡಿ ಗುರುತಿಸುತ್ತೇನೆ. ಸದರಿ ಗುದ್ದಲಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ1 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ–**

ಆರೋಪಿತರ ಪರ ವಕೀಲರ ಕೋರಿಕೆಯ ಮೇಲೆ ರೂ.500/– ವೆಚ್ಚದೊಂದಿಗೆ ಪಾಟೀಸವಾಲನ್ನು ಮುಂದೂಡಲಾಯಿತು.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.